**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ನ್ಯಾಯಾಲಯ, ಸಿರುಗುಪ್ಪ**

**ಸಿಸಿ.ನಂ.3786/2025**

ಪಿರ್ಯಾದಿಃ ಸರಕಾರ ಪರಃ ಹಚ್ಚೊಳ್ಳಿ ಪೊಲೀಸ್ ಠಾಣೆ, ಹಚ್ಚೊಳ್ಳಿ

ವಿರುದ್ಧ

ಆರೋಪಿತರುಃ

ಖಾಜಾ ಬಿನ್ ಕೋಸಗಿ ಮಲ್ಲಯ್ಯ, ವಃ 28 ವರ್ಷ, ವಾಸಃ ಹೊಸ ನಾಗಲಾಪುರ ಗ್ರಾಮ, ಸಿರುಗುಪ್ಪ ತಾಃ ಬಳ್ಳಾರಿ ಜಿಲ್ಲೆ.

ಆರೋಪಣೆ

ದಂ.ಪ್ರ.ಸಂ.ಕಲಂ 251ರ ಅಡಿಯಲ್ಲಿ ಆಪಾದನೆ

ನಾನು ಅಶೋಕ್ ಆರ್.ಹೆಚ್., ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿರುಗುಪ್ಪ ಈ ಮೂಲಕ ನಿಮ್ಮ ಮೇಲೆ ಹೊರೆಸುವ ಆರೋಪಣೆ ಏನೆಂದರೆಃ

ದಿನಾಂಕ 29.10.2025 ರಂದು ಸಂಜೆ 6.10 ಗಂಟೆ ಸುಮಾರಿಗೆ ಹಚ್ಚೊಳ್ಳಿ ಪೋಲೀಸ್ ಠಾಣೆ ಸರಹದ್ದಿನ ಹಚ್ಚೊಳ್ಳಿ ಗ್ರಾಮದ ಬಸ್ ಸ್ಟ್ಯಾಂಡ್ ಹತ್ತಿರ ಆರೋಪಿತನಾದ ನೀವು ಓರಿಜಿನಲ್ ಚಾಯ್ಸ್ ಡಿಲೆಕ್ಸ್ ವಿಸ್ಕಿ 30 ಪೌಚುಗಳನ್ನು ಮದ್ಯದ ಯಾವುದೇ ಅಧಿಕೃತ ಪರವಾನಗೆಯನ್ನು ಪಡೆಯದೇ ಮದ್ಯವನ್ನು ಸಂಗ್ರಹಿಸಿಟ್ಟುಕೊಂಡು ಅಕ್ರಮವಾಗಿ ಮಾರಾಟ ಮಾಡಿದ್ದು ಆ ಮೂಲಕ ಆರೋಪಿತನಾದ ನೀವು ಕರ್ನಾಟಕ ಅಬಕಾರಿ ಕಾಯ್ದೆ 32 ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಅಪರಾಧ ಮಾಡಿರುತ್ತೀರಾ ಎಂದು ಆರೋಪ ಮಾಡಲಾಗಿದೆ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಅನಧಿಕೃತವಾಗಿ ಸರ್ಕಾರದ ಪರವಾನಗಿ ಇಲ್ಲದೆ ಸದರಿ ಮದ್ಯವನ್ನು ಅಕ್ರಮವಾಗಿ ಜನರಿಗೆ ಮಾರಾಟ ಮಾಡುವ ಸಲುವಾಗಿ ನಿಮ್ಮ ಬಳಿ ಹೊಂದಿದ್ದು, ಆ ಮೂಲಕ ಆರೋಪಿತರಾದ ನೀವು ಕರ್ನಾಟಕ ಅಬಕಾರಿ ಕಾಯ್ದೆ 34 ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಅಪರಾಧ ಮಾಡಿರುತ್ತೀರಾ ಎಂದು ಆರೋಪ ಮಾಡಲಾಗಿದೆ.

ಆದುದರಿಂದ ಈ ಆರೋಪಣೆಯನ್ನು ನಿಮ್ಮ ಮೇಲಿಟ್ಟಿದ್ದು, ಅದರ ವಿಚಾರಣೆಯು ನಿಮ್ಮ ಮೇಲೆ ನಡೆಯತಕ್ಕದ್ದೆಂದು ಈ ಮೂಲಕ ಆದೇಶಿಸುತ್ತೇನೆ.

ಪ್ರ.ದ.ನ್ಯಾ.ದಂ., ಸಿರುಗುಪ್ಪ

**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ನ್ಯಾಯಾಲಯ, ಸಿರುಗುಪ್ಪ**

**ಸಿಸಿ.ನಂ.3786/2025**

ಪಿರ್ಯಾದಿಃ ಸರಕಾರ ಪರಃ ಹಚ್ಚೊಳ್ಳಿ ಪೊಲೀಸ್ ಠಾಣೆ, ಹಚ್ಚೊಳ್ಳಿ

ವಿರುದ್ದ

ಆರೋಪಿತರುಃ

ಖಾಜಾ ಬಿನ್ ಕೋಸಗಿ ಮಲ್ಲಯ್ಯ, ವಃ 28 ವರ್ಷ, ವಾಸಃ ಹೊಸ ನಾಗಲಾಪುರ ಗ್ರಾಮ, ಸಿರುಗುಪ್ಪ ತಾಃ ಬಳ್ಳಾರಿ ಜಿಲ್ಲೆ.

ಆಪಾದನೆ ಹೇಳಿಕೆ

ಪ್ರಶ್ನೆ ಇದೀಗ ನಿಮಗೆ ಓದಿ ಹೇಳಿದ ಆರೋಪಣೆ ತಿಳಿಯಿತೇ ?

ಆರೋಪಿಯ ಉತ್ತರಃ

ಪ್ರಶ್ನೆ ನೀವು ತಪ್ಪೊಪ್ಪಿಕೊಳ್ಳುತ್ತೀರಾ ? ಅಥವಾ ನಿಮ್ಮ ಪರ ಪ್ರತಿರಕ್ಷಣೆ ಏನಾದರೂ ಇದೆಯೇ ?

ವಿಚಾರಣೆ ಆಗಬೇಕೇ ?

ಆರೋಪಿಯ ಉತ್ತರಃ

(ಮೇಲಿನ ಆರೋಪಣೆ ಸಾರವನ್ನು ಆರೋಪಿಗೆ ಇಂದು ಮುಕ್ತ ನ್ಯಾಯಾಲಯದಲ್ಲಿ ಓದಿ ವಿವರಿಸಿ ಹೇಳಿದ್ದು ಅದನ್ನು ಅವರು ಸರಿಯಾಗಿ ಅರ್ಥ ಮಾಡಿಕೊಂಡು ನೀಡಿದ ಯಾಥಾವತ್ ಹೇಳಿಕೆಯನ್ನು ಬರೆದು ದೃಢೀಕರಿಸಲಾಯಿತು).

ದಿನಾಂಕಃ **20-08-2026** ಪ್ರ.ದ.ನ್ಯಾ.ದಂ.,ಸಿರುಗುಪ್ಪ.